ಬಾಲ ಬಳಗ





# ಚಿಗುರು ಚಿಲುಮೆ



Volume 01 Issue 07  February 15  2015





## ಎಲ್ಲಾ ಸಮಾನ ಮನಸ್ಕರಿಗೆ ನಮಸ್ಕಾರಗಳು !!

ಅಭೂತಪೂರ್ವ ಸಮಾಜ ನಿರ್ಮಾಣಕ್ಕೆ ಒಂದು ಚಿಂತಕ ಪೀಳಿಗೆ, ವೈಚಾರಿಕ ವೃಂದವನ್ನು ಸೃಷ್ಟಿ ಮಾಡುವುದು ಅವಶ್ಯವಾಗಿದೆ. ಶಿಕ್ಷಣದಲ್ಲಿ ರಂಗವೇದಿಕೆ ಬಹಳ ಪ್ರಾಮುಖ್ಯತೆ ಪಡೆಯುತ್ತದೆ. ಈ ನಿಟ್ಟಿನಲ್ಲಿ ಬಾಲಬಳಗದ ಮಕ್ಕಳ ಹಬ್ಬ ಸಾಗಿ ಬಂದ ರೀತಿ ಗಣನೀಯವಾಗಿದೆ. ಮಕ್ಕಳ ಸಮಗ್ರ ಶಿಕ್ಷಣ ಹಾಗೂ ಮಕ್ಕಳ ಹಬ್ಬ ಇವೆರಡರ ನಡುವಿನ ಅಂತರ ಅತೀ ಕಡಿಮೆಯಾದದ್ದು ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಕನಸು ನಿಧಾನವಾಗಿ ಸಾಕಾರ ಆಗ್ತಿರೋದು ಕಾಣಿಸುತ್ತಾ ಇದೆ. ಹೀಗಾಗಿ 'ಮಕ್ಕಳ ಹಬ್ಬ' ಈ ಸಂಚಿಕೆಯ ವಿಶೇಷವಾಗಿದೆ.

ಹಬ್ಬದ ವಾತಾವರಣ. ಯಾರೋ ಥಳಿ ಹೊಡೆದು ರಂಗೋಲಿ ಹಾಕಿ ಸ್ವಾಗತದ ಸಿದ್ಧತೆ ಮಾಡಿದ್ದರು. ವಾಹನ ನಿಲುಗಡೆ, ಪಾದರಕ್ಷೆ ಬಿಡುವ ಸ್ಥಳ ಎಂದು ಗುರುತಿನ ಫಲಕಗಳನ್ನು ಹಾಕಿದ್ದರು. ಯಾವ ಮಕ್ಕಳ ಕಾಲೂ ನೆಲದ ಮೇಲೆ ನಿಂತಂತೆ ತೋರಲಿಲ್ಲ. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಸಡಗರದಿಂದ ಓಡಾಡುತ್ತಿದ್ದರು. ಎಷ್ಟು ಶಿಸ್ತಾಗಿ ಕಾರ್ಯಕ್ರಮಗಳು ನಡೆದವು ಅಂದರೆ ಅದು ವಾರ್ಷಿಕ ತಯಾರಿ ಎಂದು ಸುಲಭವಾಗಿ ಗುರುತಿಸಬಹುದಾಗಿತ್ತು.

ಪ್ರತಿಯೊಂದು ಮಗು ಒಂದಲ್ಲಾ ಒಂದು ರೀತಿಯಲ್ಲಿ ವೇದಿಕೆ ಏರಬೇಕು ತನ್ನ ಅಂಜಿಕೆಯನ್ನು ಸಡಿಲಿಸಿ ಮುನ್ನಡೆಯಬೇಕು ಎನ್ನುವುದು ಬಾಲಬಳಗ ಇರಿಸಿಕೊಂಡ ನಿಯಮ. ಹಾಗೆಯೇ ಪ್ರತಿ ತರಗತಿಯಿಂದಲೂ ಒಂದೊಂದು ಕಾರ್ಯಕ್ರಮವನ್ನು ಸಮ್ಯಕ್ ಆಯೋಜನೆ ಮಾಡಿ ಮಾಲಿಕೆ ರೂಪದಲ್ಲಿ ಎರಡು ದಿನಗಳ ಕಾಲ ಹಬ್ಬ ಆಚರಿಸಲಾಗುತ್ತದೆ. ಮಕ್ಕಳ ಹಬ್ಬ ಅಥವಾ ವಾರ್ಷಿಕ ಉತ್ಸವ ಹೇಗೆ ಇರಬೇಕು, ಯಾವೆಲ್ಲಾ ಅಂಶಗಳಿಂದ ಅದು ಸಂಪೂರ್ಣವಾಗಿರಬೇಕು ಎಂದು ಅತ್ಯಂತ ಕೂಲಂಕುಶವಾಗಿ ಪರಿಗಣಿಸಿ ಪ್ರತಿಯೊಂದನ್ನು ಆರಿಸಲಾಗಿರುತ್ತದೆ. ಅದರ ಕೆಲವೊಂದಿಷ್ಟು ಅಂಶಗಳನ್ನು ಇಲ್ಲಿ ತಿಳಿಸಲಾಗಿದೆ. ಮಕ್ಕಳ ಹಬ್ಬದ ಎಲ್ಲಾ ವ್ಯವಸ್ಥೆಗಳನ್ನು ೯ನೇ ತರಗತಿಯ ಮಕ್ಕಳು ಭಾರಿ ಖುಷಿಯಿಂದ ಮಾಡಿರುತ್ತಾರೆ. ಬಯಲು ರಂಗವೇದಿಕೆಗೆ ನಿಮ್ಮೆಲ್ಲರ ಸಹಾಯದಿಂದ ಆದ ಮೇಲ್ಛಾವಣಿ ಬಹಳಷ್ಟು ಉಪಯೋಗವಾಗಿದೆ. ಅದಕ್ಕೆ ಮಕ್ಕಳು ನಿಮ್ಮೆಲ್ಲರಿಗೆ ಈ ಮೂಲಕ ಧನ್ಯವಾದಗಳನ್ನು ತಪ್ಪದೇ ತಿಳಿಸಲು ಹೇಳಿದ್ದಾರೆ.

ಈ ವರ್ಷದ ಮಕ್ಕಳ ಹಬ್ಬದಲ್ಲಿ ಬಾಲಕರು ಸಣ್ಣ ಸಣ್ಣ ಧೋತ್ರ ಉಟ್ಟು, ಹುಸಿ ಚಿಗುರು ಮೀಸೆ ಬರೆದುಕೊಂಡು ಓಡಾಡುವುದನ್ನು, ಬಾಲಕಿಯರು ಹಳ್ಳಿಯ ಪಟ್ಟೆ ಸೀರೆ ಉಟ್ಟುಕೊಂಡು ಪಿಳಿ ಪಿಳಿ ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು ಗೆಳತಿಯರೊಡನೆ ಕಿಲ ಕಿಲ ನಗುತ್ತಾ ಹೋಗುವುದನ್ನು ನೋಡುವುದೇ ಆನಂದ. ವೇದಿಕೆಯ ಮೇಲೆ ಯಾರದ್ದೋ ಪಂಚೆ ಬಿಚ್ಚಿದರೆ, ನಾಟಕದ ಸಾಲು ಮರೆತು ಹೋದರೆ ಆಗುವ ನಗೆ ಪ್ರಸಂಗ ಅಲ್ಲಿಯೇ ಸವಿಯಬೇಕು. ಬಹಳಷ್ಟು ಜನ ಪಾಲಕರು ಮಕ್ಕಳ ಹಬ್ಬಕ್ಕೆ ಬಂದು ಕುಳಿತು, ಬಹಳ ಕೊನೆಯವರೆಗೆ ಕಾಯ್ದು ನಿಂತು ನೋಡಿ ಕಾರ್ಯಕ್ರಮಗಳನ್ನು ಸವಿದರು. ಪ್ರತಿಸಾರಿಯಂತೆ ಈ ಸಲವೂ ಕೂಡ ಕೆಲವು ಪಾಲಕರು ತಮ್ಮ ಸ್ವಇಚ್ಛೆಯಿಂದ ಮಕ್ಕಳಿಗೆ ಅಲಂಕಾರ ಮಾಡುವಲ್ಲಿ ಸಹಾಯ ಮಾಡಿ ಸಂತೋಷಗೊಂಡರು.

ಇವೆಲ್ಲ ವಿಷಯಗಳನ್ನು ಹಂಚಿಕೊಳ್ಳಲು ನಮಗೂ ಸಂತೋಷ ಎನಿಸುತ್ತದೆ. ಇಮೇಲ್ ಮೂಲಕ ನಾವು ಸಾಕಷ್ಟು ಜನರನ್ನು ತಲುಪಲು ಸಾಧ್ಯವಾಗಿದೆ. ಹಾಗಾಗಿಯೂ ನಮಗೆ ಇಮೇಲ್ ನಿರ್ವಹಣೆಯಲ್ಲಿ ತೊಂದರೆಗಳಾಗುತ್ತಿವೆ. ಚಿಗುರು ಚಿಲುಮೆ ಸಂಚಿಕೆಯನ್ನು ಆಗ್ರಹ ಪೂರ್ವಕವಾಗಿ ಕೇಳಿ ಪಡೆಯುವ ಹಕ್ಕು ನಿಮಗಿದೆ. ಅಂತೆಯೇ ಬೇರೆಯವರೊಂದಿಗೆ ಮುಕ್ತವಾಗಿ ಹಂಚಿಕೊಳ್ಳಿ. ಸಮಾನ ಮನಸ್ಕರ ಬಳಗವನ್ನು ವಿಸ್ತರಿಸೋಣ. ನಿಮ್ಮ ಸಲಹೆಸೂಚನೆಗಳಿಗೆ, ಎಚ್ಚರಿಕೆ ಪ್ರೋತ್ಸಾಹಗಳಿಗೆ, ಟೀಕೆ ಟಿಪ್ಪಣಿಗಳಿಗೆ ನಮ್ಮ ಮನಸ್ಸು ತೆರೆದ ಬಾಗಿಲು. ಚಿಗುರು ಚಿಲುಮೆ ಸದ್ವಿಚಾರಗಳನ್ನು ಚರ್ಚಿಸುವ, ಈವರೆಗೆ ತಿಳಿದ ವಿಚಾರಗಳನ್ನು ಬದಿಗೊತ್ತಿ ಹೊಸದೊಂದು ಚಿಂತನೆಯನ್ನು ಕೊಡುವ ವೇದಿಕೆಯಾಗಬೇಕೆಂಬುದು ನಮ್ಮ ಆಶಯ. ಸದಾ ಸೃಜನಶೀಲ ಬದಲಾವಣೆಯನ್ನು ಎದುರುನೋಡುತ್ತಿರುವ ಚಿಗುರುಚಿಲುಮೆ.

ದೀಪಕ



# ಮಕ್ಕಳ ಹಬ್ಬ

ನಮ್ಮ ಬಾಲಬಳಗ ಶಾಲೆಯಲ್ಲಿ 'ಮಕ್ಕಳ ಹಬ್ಬ' ಎಂದರೆ ನಿಜವಾಗಿಯೂ ದೊಡ್ಡ ಹಾಗೂ ವಿಜೃಂಭಣೆಯ ಹಬ್ಬವೇ ಸರಿ! ಖುಷಿಯ ವಾತಾವರಣವೇ ಎಲ್ಲೆಡೆ ಶಾಲೆಯಲ್ಲಿ, ಮಕ್ಕಳಲ್ಲಿ, ಶಿಕ್ಷಕರಲ್ಲಿ ಕೂಡ; ಜೊತೆಗೆ ಕೆಲವು ಆಸಕ್ತ ಪಾಲಕರಿಗೂ ಸಹ ಈ ಸೋಂಕು ಅಂಟಿಕೊಂಡಿರುತ್ತದೆ.

ಮಕ್ಕಳ ಹಬ್ಬದ ವಿಶೇಷತೆ-

ನಮ್ಮ ಶಾಲೆಯ ವಿಶೇಷ ಏನೆಂದರೆ ಎಲ್ಲ ಮಕ್ಕಳಿಗೂ ಶಿಶುವಿಹಾರದಿಂದ ಪ್ರಾರಂಭಮಾಡಿ 10 ನೇಯ ತರಗತಿಯವರೆಗೆ ಎಲ್ಲರಿಗೂ, ವಿಶೇಷ ಮಕ್ಕಳಿಗೂ ಸಹ ತಮ್ಮ ಪ್ರತಿಭೆಯನ್ನು ತೋರಿಸಲು ಅವಕಾಶವಿದೆ. ಪ್ರತಿ ಮಗುವೂ ಒಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರಿಂದ ಖುಷಿಯನ್ನು ಪಡೆಯುತ್ತದೆ. ಇದರ ಜೊತೆಗೆ ಮಕ್ಕಳಿಗೆ ವೇದಿಕೆಯ ಭಯ ಕೂಡ ಕಡಿಮೆಯಾಗುತ್ತದೆ.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆಯ್ಕೆ ಮಾಡುವ ಹಾಡು ನಾಟಕಗಳ ಸಾಹಿತ್ಯಕ್ಕೆ ಬಹಳ ಮಹತ್ವವಿದೆ. ಒಳ್ಳೆಯ ಸಾಹಿತ್ಯದಿಂದ ಕೂಡಿದ ಉತ್ತಮ ಸಂದೇಶಗಳನ್ನು ನೀಡುವ ಕೃತಿಗಳನ್ನು ಆರಿಸಲಾಗುತ್ತದೆ. ಉದಾ- ಭಾವಗೀತೆಗಳು, ಜನಪದ ಗೀತೆಗಳು, ಮಕ್ಕಳ ನಾಟಕಗಳು ಇತ್ಯಾದಿ. ಸಿನಿಮಾ ಹಾಡುಗಳನ್ನೇ ಆಧಾರವಾಗಿಟ್ಟುಕೊಂಡು ಮಕ್ಕಳ ಹಬ್ಬವನ್ನು ಆಚರಿಸುವುದೇ ಇಲ್ಲ. ಎಲ್ಲೋ ಅಪರೂಪಕ್ಕೆ ಒಮ್ಮೊಮ್ಮೆ ಉತ್ತಮ ಸಾಹಿತ್ಯದ ಸಿನಿಮಾ ಹಾಡನ್ನು ಬಳಸಿಕೊಳ್ಳಲಾಗುತ್ತದೆ. ಹೀಗೆ ಹಾಡು, ನಾಟಕದ ಆಯ್ಕೆಯ ಪ್ರಕ್ರಿಯೆಯೇ ಎಲ್ಲರಿಗೂ ಒಂದು ಅನುಭವ. ನಮ್ಮ ಕಾರ್ಯಕ್ರಮದಲ್ಲಿ ಎಂತಹ ವಿಷಯ, ಸಾಹಿತ್ಯ ಇರಬೇಕೆಂಬುದನ್ನು ನಾವು ಶಿಕ್ಷಕರು ಮನಗಂಡು, ಮಕ್ಕಳು ಹಾಗೂ ಪಾಲಕರಿಗೆ ಅದನ್ನು ತಿಳಿಸಿಕೊಡುವುದೆಂದರೆ ಒಂದು ಸಾಹಸವೇ. ಹಾಡುಗಳ ಕ್ಯಾಸೆಟ್ಟುಗಳ ಬಳಕೆ ತೀರ ಕನಿಷ್ಠ ಅಥವಾ ಇರುವುದೇ ಇಲ್ಲ ಎಂದರೂ ತಪ್ಪಲ್ಲ.

ಮಕ್ಕಳ ಜವಾಬ್ದಾರಿ-

ಮಕ್ಕಳ ಹಬ್ಬದಲ್ಲಿ ಹಲವಾರು ಜವಾಬ್ದಾರಿಗಳು ಮಕ್ಕಳವೇ ಆಗಿರುತ್ತವೆ- ಆಮಂತ್ರಣ ಪತ್ರಿಕೆಗಳು, ಕರಕುಶಲ ವಸ್ತುಗಳ ತಯಾರಿ ಹಾಗೂ ಮಾರಾಟ, ಆವರಣದ ಅಲಂಕಾರ, ಹಿನ್ನೆಲೆ ಸಂಗೀತ (ವಾದ್ಯ, ಗಾಯನ) ಇತ್ಯಾದಿ. ಎರಡು ದಿನಗಳ ಕಾಲ ನಡೆಯುವ ಈ ಸಂಭ್ರಮದಲ್ಲಿ ಕಾರ್ಯಕ್ರಮದ ನಿರ್ವಹಣೆಯಂತೂ ಮಕ್ಕಳದೇ. ಅದಕ್ಕಾಗಿ ಅವರು ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಎಲ್ಲ ತರಗತಿಗಳ ಕಾರ್ಯಕ್ರಮಗಳ ವಿವರಗಳನ್ನು-ವಿಧ/ಪ್ರಕಾರ, ಹಾಡು/ಕಥೆ, ಹಿನ್ನೆಲೆ, ವೇಷಭೂಷಣ, ಸಹಕಾರ ನೀಡುವವರು ಇತ್ಯಾದಿ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಿ ಕಾರ್ಯಕ್ರಮವನ್ನು ವೀಕ್ಷಿಸಿ ತಯಾರಿ ಮಾಡಿಕೊಂಡು ನಿರ್ವಹಣೆಯನ್ನು ಹೇಗೆ ಮಾಡುತ್ತಾರೆ ಎಂದು ತೋರಿಸಬೇಕಾಗುತ್ತದೆ. ಹೆಚ್ಚು ಸ್ಪಷ್ಟವಾಗಿ ಶುದ್ಧವಾಗಿ ಮಾತನಾಡಿ ಕಾರ್ಯಕ್ರಮಗಳನ್ನು ನಡೆಸುವ ವಿದ್ಯಾರ್ಥಿಗಳು ನಿರ್ವಹಣೆಗಾಗಿ ಆಯ್ಕೆಯಾಗುತ್ತಾರೆ. ಇತ್ಯಾದಿ ಶಿಕ್ಷಕರ ಸಹಾಯದಿಂದ ನಿರ್ವಹಣೆಯ ಮಾತುಗಳನ್ನು ಅಭ್ಯಾಸಮಾಡುತ್ತಾರೆ. ಇಡೀ ಕಾರ್ಯಕ್ರಮದ ಯಶಸ್ಸು ಮೊದಲಿನಿಂದ ಕೊನೆವರೆಗೂ ಹೀಗೇ ಅವರ ಮೇಲೆಯೇ ಇರುತ್ತದೆ. ಪ್ರತಿ ವರ್ಷವೂ ನಮ್ಮ ಮಕ್ಕಳು ಅದನ್ನು ಚೊಕ್ಕವಾಗಿ ನಿರ್ವಹಿಸುತ್ತಾರೆ. ಮುಂದೆಯೂ ಕೂಡ ಅದು ಹಾಗೆಯೇ ನಡೆಯುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

ವೇದಿಕೆಯ ಮೇಲೆ ಸ್ವಾಗತದಿಂದ ಹಿಡಿದು ಮುಕ್ತಾಯದವರೆಗೆ ಮಕ್ಕಳದೇ ಕಾರುಬಾರು. ವೇದಿಕೆಯ ಮೇಲೆ ಅವರ ಮಿಂಚಿನಂತ ಮಾತು, ಕಾರ್ಯಕ್ರಮಗಳ ವಜ್ರದ ಹೊಳಪು, ಚಟ-ಪಟ ಅರಳು ಹುರಿದಂತೆ ಮಾತನಾಡುವ ವಿದ್ಯಾರ್ಥಿಗಳ ಥಳಕು ಇವೆಲ್ಲ ನೋಡಲು ಬಾಲಬಳಗಕ್ಕೆ ಬರಲೇಬೇಕು. ಕಾರ್ಯಕ್ರಮಗಳನ್ನು ನೋಡಿ ಅನುಭವಿಸಲು, ಪುಟ್ಟ ಮಕ್ಕಳ ತೊದಲು ನುಡಿಗಳನ್ನು, ಗಟ್ಟಿ-ದಿಟ್ಟ ಹೆಜ್ಜೆಗಳ ಕುಣಿತವನ್ನು, ಇಂಪಾದ ಹಾಡುಗಳನ್ನು ಅನುಭವಿಸಿ ಮೈಮರೆತು ಕೆಲಹೊತ್ತು ಮಕ್ಕಳಾಗಲು ಮಕ್ಕಳಾಗಿ ಎಲ್ಲವನ್ನು ಮರೆಯಲು!!!

ಡೇಸಿ ಮೌಶಿ



# ಮಕ್ಕಳ ಹಬ್ಬ ಮತ್ತು ನಾನು

ಸಾಲಿ ತುಂಬ ಪರಪರಿ ಹಚ್ಚೂದು, ಒಂದ ವಾರ ಯಾವ ಕ್ಲಾಸ್ ಇಲ್ಲ ಏನಿಲ್ಲ ಶಾಲೀಗ ಹೋಗೋದು, ತಬಲಾ ನುಡಿಸೋದು, ಊಟ ಮಾಡೋದು ಮನಿಗ ಬರುದು. ಬಿಡುವಿನ ಸಮಯದಾಗ ಆಮಂತ್ರಣ ಪತ್ರಿಕೆ ಮಾಡೋದು, ಇಲ್ಲಾ ಅಂದ್ರ ಮಾಮಾ-ಮೌಶಿಗಳ ಜೊತೆ ಮಜಾ ಮಾಡಕೋತ ಏನಾದ್ರು ಕೆಲ್ಸಾ ಮಾಡೋದು. ಇದ್ ಆಗಿತ್ತು ನಮಗ ನಮ್ಮ್ ಮಕ್ಕಳ ಹಬ್ಬ! ನೀವ ಹೇಳ್ರಿ ಯಾವ್ ಹಬ್ಬಕ್ಕಿಂತ ಕಮ್ಮಿ ಈ ನಮ್ಮ ಮಕ್ಕಳ ಹಬ್ಬ!!
೧೦ ಮಕ್ಕಳ ಹಬ್ಬದಾಗ ಸ್ಟೇಜಿನಮ್ಯಾಲೆ ಕುಣದಾಡೀನಿ ನಾನು. ನಾಟಕ, ಯಕ್ಷಗಾನ, ಜನಪದ ನೃತ್ಯ, ತಬಲಾ ನುಡಿಸೋದು ಹಿಂಗ ಎಷ್ಟೆಲ್ಲಾ ನಾವು. ಹಳೆ ಫೋಟೊ ನೋಡಿದಾಗ ಅಥವಾ ಸಿಡಿ ಹಾಕಿ ವೀಡಿಯೋ ನೋಡಿದಾಗ ಖುಷಿ, ಆಶ್ಚರ್ಯ, ಸ್ವಲ್ಪ ನಾಚಿಕಿ ಎಲ್ಲಾ ಆಗ್ತದ. ನನ್ನೊಳಗ ಏನೆಲ್ಲಾ ಕಲಾ ಅವ ಅನ್ನುದನ್ನ ನನಗ ತೋರಿಸಿಕೊಟ್ಟಿದ್ದು ಈ ಮಕ್ಕಳ ಹಬ್ಬ. ಹಬ್ಬಕ್ಕಂತ ಗೋಡೆ ಮ್ಯಾಲೆ ಚಿತ್ರ ತಗಿತಿದ್ವಿ. ಅವಾಗ ಗೊತ್ತಾಗಿದ್ದು ನನಗ ನಾ ಅಷ್ಟ ಚಂದನ್ನು ಚಿತ್ರಾ ತಗಿಬೋದು ಅಂತ. ಅದs ರೂಢಿನ್ನ ಇನ್ನೂ ಇಟಕೊಂಡೀನಿ. ಇನ್ನ ಬಾಲಬಳಗ ನಂಗ ತಬಲಾ ನುಡಿಸಾಕ ಬರ್ತದ ಅನ್ನೋದನ್ನ ತಿಳಿಸಿ ಭಾಳ ಚೊಲೋ ಕೆಲಸ ಮಾಡ್ತು. ಸಂಗೀತ ಅನ್ನೋ ದೊಡ್ಡ ಅರಮನೀನ ನಾನು ತಬಲಾ ಅನ್ನೋ ಬಾಗಿಲದಿಂದ ಒಳಹೊಕ್ಕೆ. ಸಂಗೀತ ಇರಲಾರದ ನನ್ನ ಜೀವನಾನ ಕಲ್ಪನೆ ಮಾಡಕೊಳ್ಳಾಕೂ ಆಗುದಿಲ್ಲಾ ನಂಗ. ಇದಷ್ಟ ಅಲ್ಲದ ನನಗ ಆಶ್ಚರ್ಯ ಆಗುಹಂತಾ ವಿಷ್ಯ ಅಂದ್ರ ಅಭಿನಯ. ನನ್ನೊಳಗಿನ ಮುಸ್ಲಿಂ ಡಾಕ್ಟರನ, ಯಕ್ಷಗಾನದಾಗಿನ ಅಗ್ನಿಯನ್ನ, ಮನಃಪರಿವರ್ತನೆಯ ಅಂಗುಲೀಮಾಲನ್ನ ನನಗ ತೋರಿಸಿಕೊಟ್ಟಿದ್ದು ಮಕ್ಕಳ ಹಬ್ಬ. ಹೆಂಗ ಅಭಿನಯ ಮಾಡಬೇಕು ಅನ್ನೋದ್ರಿಂದ ಹಿಡದು ನಾಟಕ ನಾವ ಬರದು, ಅದಕ್ಕ ಹಾಡು ನೃತ ಎಲ್ಲ ಸಂಯೋಜನೆಯನ್ನೂ ಮಾಡಿದ್ವಿ ಈ ಮಕ್ಕಳ ಹಬ್ಬದಾಗ. ನಮ್ಮೊಳಗಿರೋ ಕಲೆಯನ್ನ, ಆಸಕ್ತಿಗಳನ್ನ ಬಾಲಬಳಗದ ಮಕ್ಕಳ ಹಬ್ಬ ಎತ್ತಿ ಹಿಡಿತದ ಅನ್ನೋದ್ರಾಗ ಎರಡು ಮಾತಿಲ್ಲಾ.
ಇನ್ನು ನಾನು ನನ್ನ ಕಷ್ಟ ಹೇಳ್ಕೋಬೇಕು ಅಂತ ಮಾಡೀನಿ. ಸಾಲಿ ಬಿಟ್ಟು ೩ ವರ್ಷ ಆತು. ಆದ್ರ ಮಕ್ಕಳ ಹಬ್ಬ ಬಿಡಾಕ ಮನಸ್ಸ ಆಗುದಿಲ್ಲ. ಏನರ ಒಂದು ಕಾರಣ ಇಟಗೊಂಡು ಮಕ್ಕಳ ಹಬ್ಬದ ತಯ್ಯಾರಿಯೊಳಗ ಶಾಮಿಲ ಆಗಬೇಕು ಅನಸ್ತದ. ಸೌಂಡ ಸಿಸ್ಟಿಮ ನೋಡ್ಕೋತೀನಿ ಅಂತ ಅಥವಾ ಏನ್ರ ಹೇಳಿಕೊಡ್ತೀನಿ ಅಂತ ಹಬ್ಬಾ ಮಾಡ್ಲಿಕ್ಕೆ ಬಂದ ಬಿಡ್ತೇನಿ ನಾನೂ. ನನ್ನುವು exam ಇರಲಿ, ಮನ್ಯಾಗ ಕಾರ್ಯಕ್ರಮ ಇರಲಿ ಏನ ಇದ್ರೂ ನಾನು ಮಕ್ಕಳ ಹಬ್ಬಾನ ಆರಸ್ಕೋತೀನಿ. ಇಲ್ಲೇ ಸಣ್ಣ ಮಕ್ಕಳು ಹಾಡೂದನ್ನ, ಮಾಮಾ- ಮೌಶಿ ಸಣ್ಣವ್ರ ಆಗಿ ಕುಣಿಯೂದ ಕಲಸೂದನ್ನ, ಮಕ್ಕಳು ಕಲಿಯೂಬೇಕಾದ್ರ ತಪ್ಪಿ ತಿದ್ದಿಕೊಳ್ಳೋದನ್ನ ನೋಡೂದ್ರಾಗಿರೋ ಮಜಾ ಮತ್ತ ಎದರಾಗೂ ಸಿಗೋದಿಲ್ಲಾ ನಂಗ. ಹಂಗಾಗಿ ಎಷ್ಟ ಮುದಕಾದ್ರುನೂ ನಾ ಮಕ್ಕಳ ಹಬ್ಬಕ್ಕ ಬಂದು ಕೆಲಸ ಮಾಡವ್ನ!

ಇನ್ನು ನಮ್ಮ ಶಾಲಿಗೆ ಸಣ್ಣ್ ವಿನಂತಿನೂ ಅದ. ಶಾಲ್ಯಾಗ ಮಕ್ಕಳ ಹಬ್ಬ, ಪಾಲಕರ ಹಬ್ಬ ಎಲ್ಲಾ ಆಗ್ತಾವ. ಸಾಲಿ ಬಿಟ್ಟು ಹೋದ ಮಕ್ಕಳ ಹಬ್ಬಾನೂ ಆಗಬೇಕು. ನಾವೆಲ್ಲಾ ಮತ್ತ ಸಾಲಿ ಸ್ಟೇಜಿನ ಮ್ಯಾಲೆ ಹತ್ತಿ ಕುಣಿಬೇಕು, ನಾಟಕ ಆಡಬೇಕು ಅನ್ನೂದು ನನ್ನ ಆಸೆ. ಹಿಂಗಾದ್ರಂತೂ ಸಾಲಿ ಜೊತೆ ಇರೋ ನಮ್ಮ ಸಂಬಂಧ ಇನ್ನೂ ಶ್ರೀಮಂತ ಆಗ್ತದ. ಹೆಂಗರ ಮಾಡಿ ಈ ಹಳೆಯ ವಿದ್ಯಾರ್ಥಿಗಳ ಹಬ್ಬದ ಹೊಸಾ ವಿಚಾರಾನ ಕಾರ್ಯರೂಪಕ್ಕ ತರೂಣು ಅಂತ ಕೇಳ್ಕೋತೀನಿ.
ಇನ್ನ ಒಟ್ಟಾರೆಯಾಗಿ ಮಕ್ಕಳ ಹಬ್ಬದ ಬಗ್ಗೆ ನನ್ನ ಅನಿಸಿಕೇನ ಒಂದು ಭಾರಿ ಪ್ರಸಿದ್ಧ ಶಾಯರಿ ಸ್ವಲ್ಪ ಬದಲು ಮಾಡಿ ಹೇಳಿ ಮುಗಸ್ತೀನಿ.

"ಕೌನ ಕಂಬಖ್ತ ಕೆಹತಾ ಹೆ ಕಿ ಜನ್ನತ್ ಊಪರ ಹೈ? ಉಸ್ಸೆ ಜರಾ ಬಾಲಬಳಗಾಕೆ ಮಕ್ಕಳ ಹಬ್ಬಾ ಕೊ ತೊ ಭೇಜೋ!!"

ಶರತ. ಅಂಚಟಗೇರಿ



# ಮಕ್ಕಳ ಹಬ್ಬ

ಪ್ರವಾಸ ಮುಗಿಯಿತು. ಕ್ರೀಡಾಕೂಟ ಕೂಡಾ ಮುಗಿಯಿತು. ಇನ್ನು ಮಕ್ಕಳ ಹಬ್ಬ ಯಾವಾಗ ಬರುತ್ತದೆಯೋ ಎಂದು ಕುತೂಹಲದಿಂದ ಕಾಯುತಿದ್ದೆ. ಮಕ್ಕಳ ಹಬ್ಬವೂ ಕಣ್ಣು ಮುಚ್ಚಿ ಕಣ್ಣು ತೆರೆಯುವುದರಲ್ಲಿ ಮುಗಿದೇ ಹೋದ ಹಾಗೆ ಎನಿಸಿತು. ಅಬ್ಬಬ್ಬಾ! ಮಕ್ಕಳ ಹಬ್ಬಕ್ಕೆ ಏನು ತಯಾರಿ, ಏನು ಅಲಂಕಾರ, ಮಕ್ಕಳೇ ಮಾಡಿದ ಡಬ್ಬಿಗಳು, ಮಕ್ಕಳೇ ಮಾಡಿದ ತಟ್ಟು, ಮಕ್ಕಳೇ ಸ್ವತಃ ಮಾಡಿದ ಪೆನ್, ಪೆನ್ಸಿಲ್ ಇಡುವ ಸ್ಟ್ಯಾಂಡ ಮತ್ತು ಓಲೆಗಳು ನೋಡಿದರೆ ನಿಜಕ್ಕೂ ಆಶ್ಚರ್ಯವಾಗುತ್ತದೆ. ಒಂಬತ್ತನೆಯ ತರಗತಿಯವರು ಅದೆಷ್ಟು ಜವಾಬ್ದಾರಿ ತೆಗೆದುಕೊಂಡು ಕಾರ್ಯ ನಿರ್ವಹಿಸಿದರು, ಅವರು ಮಾಡಿದ ಅಲಂಕಾರ ಅವರು ತೆಗೆದುಕೊಂಡ ಜವಾಬ್ದಾರಿ ನೋಡಿದರೆ ನಿಜಕ್ಕೂ ಬೆರಗಾಗುತ್ತದೆ. ಅಷ್ಟೇ ಚೆನ್ನಾಗಿ ಗ್ರಾಹಕರನ್ನು ಕರೆದು ಅವರಿಗೆ ಎಲ್ಲ ವಸ್ತುಗಳ ಉಪಯೋಗಗಳನ್ನು ತಿಳಿಸಿ ಮಾರಾಟ ಮಾಡಿದರು. ಮೊದಲನೆಯ ದಿನ ಶಶಿಧರ ತೋಡಕರ ಎಂಬ ಮಹಾತ್ಮರು ನಮ್ಮ ಶಾಲೆಗೆ ಅತಿಥಿಗಳಾಗಿ ಬಂದಿದ್ದು ನಿಜಕ್ಕೂ ಸಂತೋಷದ ವಿಷಯ. ಅವರು ಅಷ್ಟೇ ಚೆನ್ನಾಗಿ ಭಾಷಣವನ್ನು ಮಾಡಿದರು. ಮೊದಲ ದಿನದ ಕಾರ್ಯಕ್ರಮಗಳು ತುಂಬಾ ಚೆನ್ನಾಗಿ ನಡೆದವು. ಪುಟ್ಟ ಪುಟಾಣಿಗಳ ನೃತ್ಯ, ನಾಟಕಗಳನ್ನು ನೋಡಲು ಎರಡು ಕಣ್ಣು ಸಾಲದು. ಮೊದಲನೆಯ ದಿನವೇ ನಮ್ಮ ನಾಟಕವಿತ್ತು. ರಘೋತ್ತಮನು ಮಾಡಿದ ನಟನೆಗೆ ಚಪ್ಪಾಳೆ, ಸಿಳ್ಳೆಗಳು ಬೇಗನೆ ನಿಲ್ಲಲೇ ಇಲ್ಲ. ನಮ್ಮ ಶಾಲೆಯಲ್ಲಿ ಚಲನಚಿತ್ರದ ಹಾಡುಗಳನ್ನು ಹಾಕಿ ಕುಣಿಸುವುದಿಲ್ಲ. ಈ ವಿಷಯ ಕೇಳಿ ನನಗೆ ತುಂಬಾ ಸಂತೋಷವಾಗುತ್ತದೆ. ಎರಡನೆಯ ದಿನ ನಮಗೆ ಅತಿಥಿಗಳಾಗಿ ಅತ್ಯುತ್ತಮ ವ್ಯಕ್ತಿಯೊಬ್ಬರು ಬಂದಿದ್ದರು. ಅವರೇ ಶಕ್ತಿ ಪಾಟೀಲ ಕಣ್ಣಿಲ್ಲದಿದ್ದರೂ ಎಷ್ಟು ಸಾಧನೆ ಮಾಡಿದ್ದಾರೆ. ಅಂತಹ ವ್ಯಕ್ತಿಗಳಿಗೆ ನಾನು ನೆನೆಪಿನ ಕಾಣಿಕೆ ಕೊಟ್ಟದ್ದು ತುಂಬಾ ಹೆಮ್ಮೆ ಎನಿಸುತ್ತಿದೆ. ಅವರಹಾಡು ಕೆಳಿದರೆ ಕೇಳುತ್ತಲೇ ಇರಬೇಕೆನಿಸುತ್ತದೆ. ಎರಡನೆಯ ದಿನದ ಕಾರ್ಯಕ್ರಮಗಳೂ ಸಹ ತುಂಬಾ ಚೆನ್ನಾಗಿ ನಡೆದವು. ಕೊನೆಯ ನೃತ್ಯ ಹತ್ತನೆಯ ತರಗತಿಯವರದು ಅವರು ಬಾಂಗಡಾ ಎಂಬ ಪಂಜಾಬಿ ಶೈಲಿಯ ನೃತ್ಯ ಮಾದಿದರು ಅವರಿಗೆ ಇದೇ ಕೊನೆಯ ಅವಕಾಶ ಇದ್ದುದರಿಂದ ಮೈಯಲ್ಲಿರುವ ಶಕ್ತಿಯನ್ನೆಲ್ಲಾ ಬಳಸಿ ತುಂಬಾ ಜೋಶ್‌ನಿಂದ ಕುಣಿದರು ಎರಡನೆಯದಿನ ಮನೆಗೆಹೋಗುವಾಗ ಈ ವರ್ಷದ ಮೂರು ಖುಷಿ ಕೊಡುವ ಅವಕಾಶಗಳು ಮುಗಿದವು ಎಂದು ಬೇಸರದಿಂದ ಮನೆಗೆ ಹೋದೆ.

ಧನ್ಯವಾದಗಳು

ಭರತ ಚಿ ಕುಲಕರ್ಣಿ
8 ನೇ ತರಗತಿ

ಮಕ್ಕಳ ಹಬ್ಬ ವರ್ಷಕ್ಕೊಮ್ಮೆ ಬರುವಂಥ ಹಬ್ಬ. ಈ ಹಬ್ಬ ಬಂತೆಂದರೆ ಮಕ್ಕಳಿಗೆ ಖುಷಿಯೋ ಖುಷಿ. ಹಬ್ಬದಲ್ಲಿ ನಾಟಕ, ನೃತ್ಯ ಮುಂತಾದವುಗಳನ್ನು ಮಕ್ಕಳಿಂದ ಮಾಡಿಸುತ್ತಾರೆ. ಈ ಹಬ್ಬದಲ್ಲಿ ನಮಗೆ ಬಹಳ ಇಷ್ಟವಾದುದು ಮ್ಯಾಟ್ ಹೆಣೆಯುವುದು. ಅರಾವಳಿ(8) ತರಗತಿಯಿಂದ ನಾವು ನಾಟಕ ಮಾಡಿದೆವು. ಅದೇನೆಂದರೆ 'ನಿಜವಾದ ಸ್ವರ್ಗ'. ಈ ನಾಟಕವನ್ನು ಮಾಡಿಸಿದವರು ವೀರಣ್ಣ ಪತ್ತಾರ್. ಮೊದಲು ಈ ನಾಟಕವನ್ನು 'ಧಾರವಾಡ ಥಿಯೆಟರ್ಸ್'ನಲ್ಲಿ ಮಾಡಿದ್ದೆವು. ಅಲ್ಲಿ ನಮ್ಮ ತಂಡ 3ನೇ ಸ್ಥಾನ ಪಡೆಯಿತು. ನಂತರ ಹುಬ್ಬಳ್ಳಿಯ ನೆಹರು ಕ್ರೀಡಾಂಗಣದಲ್ಲಿ ನಮ್ಮ ತಂಡ ನಾಟಕ ಪ್ರದರ್ಶಿಸಿತು. ಅದಾದ ನಂತರವೇ ಮಕ್ಕಳ ಹಬ್ಬದಲ್ಲಿ ಪ್ರದರ್ಶಿಸಿದೆವು. ನಾವು ಪ್ರ್ಯಾಕ್ಟೀಸ್ ಮಾಡುತ್ತಿದ್ದೆವು ಆದರೆ ಹೆಚ್ಚು ಗದ್ದಲ ಹಾಕುತ್ತಿದ್ದೆವು. ಸ್ಟೇಜ್ ಮೇಲೆ ನಾವು ಒಳ್ಳೆಯದಾಗಿ ಪ್ರದರ್ಶಿಸಿದೆವು. ನಮ್ಮ ನಾಟಕದ ಒಳ್ಳೆಯ ಪ್ರದರ್ಶನ ತೋರಿದ ಹೀರೋ ರಘೋತ್ತಮ.ಮಹಿಪತಿ. ನಮ್ಮ ಬಿಟ್ಟು ಸಣ್ಣ ಮಕ್ಕಳು ಬಹಳ ಒಳ್ಳೆಯದಾಗಿ ಮಾಡಿದರು. ಮೊದಲ ದಿನದ ಅತಿಥಿಗಳಾಗಿ ಶಶಿಧರ ತೋಡಕರ ಬಂದಿದ್ದರು. ಎಲ್ಲ ಕಾರ್ಯಕ್ರಮಗಳು ಬಹಳ ಒಳ್ಳೆಯದಾಗಿ ನಡೆದವು.

ಕ್ಷಿತಿಜ.ಸಿಂಗನಮಲ್ಲಿ
8ನೇ ತರಗತಿ
ಬಾಲಬಳಗ

## ಕೊನೆಯ ಮಕ್ಕಳ ಹಬ್ಬದ ಮೆಲುಕು

ಮಕ್ಕಳ ಹಬ್ಬ ಎಂದರೆ ಎಲ್ಲಡೆ ಸಡಗರ, ಸಂತೋಷ, ಹುರುಪು. ಮಕ್ಕಳ ಹಬ್ಬ ಎಂದರೆ ಮಕ್ಕಳಿಗೆ ಮತ್ತು ಪಾಲಕರಿಗೆ ದೊಡ್ಡ ಜವಾಬ್ದಾರಿ. ನಾವೆಲ್ಲರೂ 2 ವಾರದ ಮೊದಲು ನೃತ್ಯದ ತಯಾರಿ ನಡೆಸಿದ್ದೆವು. ನಮಗಾಗಿ ಸುಂದರ ವೇದಿಕೆ ಸಜ್ಜಾಗಿ ನಿಂತಿತ್ತು. ಒಂದು ತರಹ ನಮ್ಮ ಶಾಲೆ ಮದುವೆ ಮನೆ ತರಹ ಆಗಿತ್ತು. ಎಲ್ಲೆಡೆ ಓಡಾಟ. ಆ ಹಬ್ಬದ ವಾತಾವರಣ ಎಲ್ಲರ ಮನ ತುಂಬಿ ಬಂದಿತು. ಎಲ್ಲರೂ ಪಾಲಕರನ್ನು ಮತ್ತು ಅತಿಥಿಗಳನ್ನು ಸ್ವಾಗತಿಸಲು ಸಿದ್ಧರಾಗಿ ನಿಂತಿದ್ದೆವು. ಕೊನೆಗೂ ಮಕ್ಕಳ ಹಬ್ಬದ ದಿನಕ್ಕೆ ನಾವೆಲ್ಲರು ಕಾಲಿಟ್ಟೆವು. ಸೂರ್ಯ ಮುಳುಗುವ ಸಂದರ್ಭದಲ್ಲಿ, ಹಕ್ಕಿಗಳು ಚಿಲಿಪಿಲಿಗೂಡುತ್ತ ಗೂಡಿಗೆ ಹೊರಟಿದ್ದ ಸಮಯದಲ್ಲಿ ನಮ್ಮ ಮಕ್ಕಳ ಹಬ್ಬ ಪ್ರಾರಂಭವಾಯಿತು. ಚಿಕ್ಕ ಮಕ್ಕಳು ಜಿಗಿಯುತ್ತ, ನೆಗೆಯುತ್ತ ನೃತ್ಯವನ್ನು ಮಾಡಿ ಹೋದರು. ಮೊದಲನೇ ದಿನ ಚಿಕ್ಕ ಮಕ್ಕಳ ನೃತ್ಯ ಮತ್ತು 8ನೇ ತರಗತಿಯ ಮಕ್ಕಳ ನಾಟಕವಿತ್ತು. ಅವರು ನಮಗೆ ಭೂಲೋಕದಲ್ಲಿ ಸ್ವರ್ಗವನ್ನು ತೋರಿಸಿಕೊಟ್ಟರು. ನಂತರ ಎರಡನೇ ದಿನ ನಮ್ಮ ಕಾರ್ಯಕ್ರಮವಿತ್ತು. ನಾವೆಲ್ಲರು ಬೇಗ ಬೇಗ ಅಲಂಕಾರ ಮಾಡಿಸಿಕೊಂಡಿದ್ದೆವು. ಕೊನೆಗೂ ನಮ್ಮ ನೃತ್ಯದ ಸಮಯ ಬಂದಿತು. ನಾವೆಲ್ಲ ಸಂತೋಷದಿಂದ ನೃತ್ಯವನ್ನು ಮಾಡಿದೆವು. ಚಪ್ಪಾಳೆಗಳು ನಮ್ಮನ್ನು ಹುಡುಕಿಕೊಂಡು ಬಂದವು. ನಂತರ ನಾವೆಲ್ಲರು ಫೋಟೊ ತೆಗೆಸಿಕೊಂಡೆವು. ಕೊನೆಯ ಮಕ್ಕಳ ಹಬ್ಬ ನಮ್ಮೆಲ್ಲರ ಮನದಲ್ಲಿ ಮನೆ ಮಾಡಿತು.



ರಕ್ಷಿತಾ ಪಾಟೀಲಕುಲಕರ್ಣಿ
10ನೇ ತರಗತಿ

## ಮಕ್ಕಳ ಹಬ್ಬದ ಅನಿಸಿಕೆ

ಪ್ರತಿ ವರ್ಷದಂತೆ ಈ ವರ್ಷವೂ ನಮ್ಮ ಶಾಲೆಯಲ್ಲಿ ಅದ್ದೂರಿಯಾಗಿ ಮಕ್ಕಳ ಹಬ್ಬವನ್ನು ಆಚರಿಸಿದೆವು. ಅದು ಈ ತಿಂಗಳು 6-2-2015 ಮತ್ತು 7-2-15ರಂದು ನಡೆದಿತ್ತು. ನಾವೆಲ್ಲ ಮಕ್ಕಳು ಹುರುಪಿನಿಂದ ಆಚರಿಸಿದ್ದೆವು. ಮಕ್ಕಳು ಈ ಖುಷಿಯಲ್ಲಿ ಎಷ್ಟು ಭಾಗಿಯಾಗಿರುತ್ತಾರೋ ಅಷ್ಟೇ ಖುಷಿಯಲ್ಲಿ ಶಿಕ್ಷಕರೂ ಭಾಗಿಯಾಗಿರುತ್ತಾರೆ. ಬೇರೆ ಶಾಲೆಯಲ್ಲಿ ಮಕ್ಕಳ ಹಬ್ಬ ಆಚರಿಸುವಂತೆ ನಮ್ಮ ಶಾಲೆಯಲ್ಲಿ ಆಚರಿಸುವುದಿಲ್ಲ. ನಮ್ಮ ಶಾಲೆಯ ಮಕ್ಕಳ ಹಬ್ಬಕ್ಕೆ ಹಾಗೂ ಬೇರೆ ಶಾಲೆಯ ಮಕ್ಕಳ ಹಬ್ಬಕ್ಕೆ ವ್ಯತ್ಯಾಸವಿದೆ. ಬೇರೆ ಶಾಲೆಗಳಲ್ಲಿ ಬೇರೆ ಬೇರೆ ಚಲನಚಿತ್ರಗಳ ಹಾಡುಗಳನ್ನು ಹಾಕಿ ಕುಣಿಯುತ್ತಾರೆ. ಆದರೆ ನಮ್ಮ ಶಾಲೆಯಲ್ಲಿ ಒಳ್ಳೆಯ ಅರ್ಥಪೂರ್ಣ ಹಾಡುಗಳನ್ನು ನಾವೇ ಹಾಡಿ ಕುಣಿಯುತ್ತೇವೆ ಹಾಗೂ ನಾಟಕಗಳನ್ನು ಮಾಡುತ್ತೇವೆ. ನಾವು ಈ ವರ್ಷ ಪಂಜಾಬ ರಾಜ್ಯದ ಜನಪದ ನೃತ್ಯವಾದ ಭಾಂಗರಾವನ್ನು ಮಾಡಿದೆವು. ಸಣ್ಣ ಸಣ್ಣ ಮಕ್ಕಳು ಮುದ್ದು ಮುದ್ದಾಗಿ ಕುಣಿದರು. ನಿರೂಪಣೆಯ ವಿಧಾನ ಚೆನ್ನಾಗಿತ್ತು. ಈ ವರ್ಷ ಕಾರ್ಯಕ್ರಮಗಳು ಬಹಳ ಬೇಗನೆ ಮುಗಿದವು. ಆದರೆ ಈ ಬಾರಿಯ ನಮ್ಮ ಅಂದರೆ 10ನೇ ತರಗತಿಯ ವಿದ್ಯಾರ್ಥಿಗಳ ಕೊನೆಯ ಮಕ್ಕಳ ಹಬ್ಬ ಆಗಿತ್ತು. ಹಾಗಾಗಿ ಈ ಮಕ್ಕಳ ಹಬ್ಬವನ್ನು ಖುಷಿಯಿಂದ ಆಚರಿಸಿದೆವು. ಏನೋ ಈ ಮಕ್ಕಳ ಹಬ್ಬವೆಂದರೆ ಸಂಭ್ರಮವೋ ಸಂಭ್ರಮ. ಅಂತೂ ಇಂತೂ ನಾವು ಮಕ್ಕಳಹಬ್ಬವನ್ನು ಮುಗಿಸಿದೆವು.



ಪದ್ಮಶ್ರೀ
10ನೇ ತರಗತಿ

## ಮಕ್ಕಳ ಹಬ್ಬದ ಅನಿಸಿಕೆ

ಬೇರೆ ಶಾಲೆಯಲ್ಲಿ ಕ್ಯಾಸೆಟ್ ಹಾಕಿ ಡ್ಯಾನ್ಸ ಮಾಡಸ್ತಾರ. ನಮ್ಮ ಶಾಲೆಯಲ್ಲಿ ಸಾಂಸ್ಕೃತಿಕ ಹಾಡು ನೃತ್ಯಗಳಿಂದ ನಾವು ಮಕ್ಕಳಹಬ್ಬ ಮಾಡುತ್ತೇವೆ. ನೃತ್ಯ, ನಾಟಕ ಮತ್ತು ಸಂಗೀತ ಸೇರಿದಾಗ ಅದ್ಭುತವಾದ ಕಾರ್ಯಕ್ರಮ ಉಂಟಾಗುತ್ತದೆ . 10ನೇ ತರಗತಿoiÀiವರ ಭಾಂಗರಾ ಡ್ಯಾನ್ಸ ಎಂದರೆ ತಿಳಿಯಿತು. 7ನೇ ತರಗತಿಯವರು ಹೊಸ ಚಟುವಟಿಕೆಯನ್ನು ಮುಂದಿಟ್ಟರು. 8ನೇ ತರಗತಿಯವರು ಮಾಡಿದ ನಾಟಕದಲ್ಲಿ ಮಾತುಗಳು ಕೇಳಿಸಲಿಲ್ಲ 5ನೇ ತರಗತಿಯ ನಾಟಕಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಖುಷಿಯಾಯಿತು. ಹಕ್ಕಿಗಳು ನೃತ್ಯದ ಕವಿತೆ ಬಹಳ ಚಂದದ ಶಬ್ದಗಳಿಂದ ಕೂಡಿತ್ತು. 2ನೇ ತರಗತಿಯ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಗುಬ್ಬಚ್ಚಿ, ಮಿಂಚುಳ್ಳಿ, ಬೆಳ್ಳಕ್ಕಿ ನಾಟಕ ನೃತ್ಯ ಮುತ್ತಿನ ಹಾರದಿಂದ ರಂಗಭೂಮಿಯನ್ನು ಅಲಂಕರಿಸಿತ್ತು. ವೇಷಭೂಷಣಗಳನ್ನು ಮೌಶಿಗಳು ಚೆನ್ನಾಗಿ ಮಾಡಿದ್ದರು. ರಂಗವೇದಿಕೆಗೆ ಪರಪರಿಯಿಂದ ಅಲಂಕಾರಮಾಡಿ ವಸ್ತುಗಳನ್ನು ಮಾರಾಟಕ್ಕಿಟ್ಟಿದ್ದರು. ಬಾಲಬಳಗದ ಹೋದ ವರ್ಷದ ಗುಬ್ಬಚ್ಚಿಯವರು ಮಾಡಿದ ನೃತ್ಯದ ಫ್ಟೆಟೊ ಹಚ್ಚಿದ್ದರಿಂದ ನಮಗೆ ಬಹಳ ಸಂತೋಷವಾಯಿತು.

ಸುಮನ್ ಯತ್ನಟ್ಟಿ
5ನೇ ತರಗತಿ

## Reviews on 'MAKKALA HABBA‘
### (About our first visit to Makkala Habaa)

Program began with a mesmerizing performance followed by other series of amazing activities. Each and every act performed tried its best to convey some message to the audience gathered.
Students also gave justice to the roles they played. Most highlighted was the culture practiced in the school environment.
An aura of mirth and festivity filled the open theatre as the lovely kids and young artists occupied the stage.
Finally a well organized, well planned program was delivered. Just enjoyed it. Loved it!

Suma .A. Patil
(Engineering student)
Shanta .A. Patil
(Home maker)


## ಸಮಾನತೆ

ಲಿಂಗ ಸಮಾನತೆ ಎಂಬುದು ಬಾಲಬಳಗದ ಬಹಳ ಮಹತ್ವದ ಮೌಲ್ಯಗಳಲ್ಲಿ ಒಂದು- ಇದನ್ನು ನಾವು ಮಕ್ಕಳ ಹಬ್ಬದ ಸಂದರ್ಭದಲ್ಲಿ ಕೂಡ ಮೊದಲಿನಿಂದಲೂ ಅಳವಡಿಸಿಕೊಂಡು ಬಂದಿದ್ದೇವೆ. ಶಾಲೆಯಲ್ಲಿ ಮಕ್ಕಳ ಹಬ್ಬ ಎಂದರೆ ವಾರ್ಷಿಕ ಸ್ನೇಹ ಸಮ್ಮೇಳನದಂದು ಸಮಾಜದ ಗಣ್ಯರೊಬ್ಬರನ್ನು ಅತಿಥಿಯಾಗಿ ಕರೆಯುವುದು ಸರ್ವಸಾಮಾನ್ಯ ವಾಡಿಕೆ. ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಹೀಗೆ ಗಣ್ಯರನ್ನು ಆರಿಸಿವುದೆಂದರೆ ಬಹುತೇಕವಾಗಿ ಅವರು ಪುರುಷರಾಗಿರುತ್ತಾರೆ. ಅರ್ಥಾತ್ ನಾವು ಹೆಚ್ಚು ಸಲ ಪುರುಷರನ್ನೇ ಅತಿಥಿಯಾಗಿ ಕರೆಯಬೇಕಾಗುತ್ತದೆ. ಆದರೆ ಬಾಲಬಳಗದಲ್ಲಿ ನಾವು ಮೊದಲಿನಿಂದಲೂ ಪ್ರತಿ ವರ್ಷ ಮಕ್ಕಳ ಹಬ್ಬಕ್ಕೆ ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ ಹೀಗೆ ಇಬ್ಬರನ್ನೂ ಕರೆಯುತ್ತ ಬಂದಿದ್ದೇವೆ. ಇದು ಮಕ್ಕಳ ಹಬ್ಬ ಎಂದರೆ ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳ ದಿನವಾದುದರಿಂದ ಸಹಜವಾಗಿಯೇ ಅತಿಥಿಗಳ ಮಾತು ಬಹಳ ಕಡಿಮೆ ಸಮಯದ್ದಾಗಿರುತ್ತದೆ. ಮೊದಲಿನ ಕೆಲವು ವರ್ಷ ಮಕ್ಕಳ ಹಬ್ಬ ಒಂದೇ ದಿನ ನಡೆಯುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿರುವುದರಿಂದ ಮಕ್ಕಳ ಹಬ್ಬವನ್ನು ಎರಡು ದಿನ ಆಚರಿಸುತ್ತಿದ್ದೇವೆ. ಹೀಗಾಗಿ ಈಗ ಒಂದೊಂದು ದಿನ ಒಬ್ಬೊಬ್ಬ ಅತಿಥಿ ಬರುತ್ತಾರೆ. ಬಂದಂತಹ ಅತಿಥಿಗಳ ವ್ಯಕ್ತಿತ್ವ ಮತ್ತು ಸಾಧನೆಯ ಪರಿಚಯ ಆಗುವುದರಿಂದ ಮಕ್ಕಳಿಗೆ ನಿಧಾನವಾಗಿ ಆದರೂ ಪುರುಷ ಮತ್ತು ಮಹಿಳೆ ಇಬ್ಬರೂ ಒಳ್ಳೆಯ ಸಾಧನೆ ಮಾಡಲು ಸಾಧ್ಯ ಎಂಬ ಸಂಗತಿ ಅರಿವಾಗುತ್ತಾ ಹೋಗುತ್ತದೆ.


ಅತಿಥಿಗಳಾಗಿ ಶ್ಯಾಮಸುಂದರ ಬಿದರಕುಂದಿ , ಮೀನಾ ಚಂದಾವರಕರ್


ಅತಿಥಿಗಳು ಶಶಿಧರ ತೋಡಕರ 06-2-15


ಮಕ್ಕಳ ಹಬ್ಬದ ಸಂದರ್ಭದಲ್ಲಿ ಶಕ್ತಿ ಪಾಟೀಲ್ 07-2-15




## ಅತಿಥಿ ದೇವರಿಗಾಗಿ ಚಿತ್ತಾರದ ಆಮಂತ್ರಣ

ಬಾಲಬಳಗದಲ್ಲಿ ಮಕ್ಕಳ ಹಬ್ಬ ಬಂದಾಗ ಆಮಂತ್ರಣಪತ್ರಿಕೆಯನ್ನು ತಯಾರಿಸುವ ಸಂಭ್ರಮವೇ ಬೇರೆ. ಆಮಂತ್ರಣಪತ್ರಿಕೆ ಎಂದಾಗ ಮುದ್ರಣಾಲಯ ಎಲ್ಲರ ವಿಚಾರಕ್ಕೆ ಬರುವುದು ಸಹಜ. ಆದರೆ ನಮ್ಮ ಬಳಗದ ವಿಚಾರ ಇದಲ್ಲ. ಮಕ್ಕಳಹಬ್ಬ ಎಂದರೆ ಎಲ್ಲವೂ ಮಕ್ಕಳೇ ತಯಾರಿಸುವ ಪರಿಪಾಠ ಬಾಲಬಳಗದ್ದು. ಹೀಗಾಗಿ ಮಕ್ಕಳಹಬ್ಬಕ್ಕಿಂತ ಒಂದು ತಿಂಗಳ ಮೊದಲಿನಿಂದಲೇ ಮಕ್ಕಳು ಮತ್ತು ಶಿಕ್ಷಕರು ಸೇರಿ ಈ ವರ್ಷದ ಆಮಂತ್ರಣಪತ್ರಿಕೆ ಹೇಗೆ ಮಾಡುವುದು ಎಂಬ ವಿಚಾರದಿಂದ ತಮ್ಮಲ್ಲಿರುವ ಸೃಜನಶೀಲತೆಯನ್ನು ಕರಕುಶಲತೆಯ ಮೂಲಕ ತೋರುತ್ತಾ ಬರುತ್ತಿದ್ದಾರೆ. ಆಮಂತ್ರಣಪತ್ರಿಕೆಗಳನ್ನು ತಯಾರಿಸುವಲ್ಲಿ ಈ ವರ್ಷ ಮದುವೆಯ ಹಳೆಯ ಆಮಂತ್ರಣಪತ್ರಿಕೆಗಳು ಉಪಯೋಗವಾಗಿದ್ದರೆ ಅದರ ಮುಂದಿನ ವರ್ಷ ಕಾರ್ಡಶೀಟಿನ ಉಪಯೋಗವಾಗಿರುತ್ತದೆ. ಇದರ ಮೂಲಕ ಮರುಬಳಕೆಗೆ ಪ್ರಾಧಾನ್ಯತೆ ನೀಡಲಾಗಿದೆ. ಈ ವಿಶೇಷ ಪರಿಪಾಠದ ಅನುಭವ ನನಗಿದೆ. ಸ್ವಲ್ಪ ಮಟ್ಟಿಗೆ ಮುದ್ರಣಾಲಯದ ಸಹಾಯವಿದ್ದರೂ ಅದು ರಂಗುರಂಗಾಗಿ ಕಾಣಲು ಶಾಲೆಯ ಮಕ್ಕಳು ಮತ್ತು ಶಿಕ್ಷಕರೇ ಕಾರಣ. ಹಾಗಾಗಿ ಪ್ರತಿವರ್ಷವೂ ಬಾಲಬಳಗದ ಮಕ್ಕಳ ಹಬ್ಬದ ಬಗ್ಗೆ ಕುತೂಹಲ ಮೂಡುವುದೇ ನಮ್ಮ ಆಮಂತ್ರಣಪತ್ರಿಕೆಯಿಂದ. ಆಮಂತ್ರಣಪತ್ರಿಕೆಯನ್ನು ತಯಾರಿಸುವುದು ಅಷ್ಟೇ ಅಲ್ಲ , ಅತಿಥಿಗಳಿಗೆ, ನಮ್ಮ ಶಾಲೆಯ ಜೊತೆ ಒಡನಾಟ ಇಟ್ಟುಕೊಂಡ ಮಿತ್ರಬಳಗಕ್ಕೆ, ಎಲ್ಲ ಶಾಲಾ-ಕಾಲೇಜುಗಳಿಗೆ ಮತ್ತು ಪಾಲಕರಿಗೆ ತಲುಪಿಸುವ ಜವಾಬ್ದಾರಿ ಬಾಲಬಳಗದ ಮಕ್ಕಳದ್ದು. ಬಾಲಬಳಗದ ಮಕ್ಕಳಹಬ್ಬದ ಆಕರ್ಷಣೆ ಜನರಲ್ಲಿ ಮೂಡುವುದು ಇಲ್ಲಿಂದಲೇ ಪ್ರಾರಂಭ. ಈ ರೀತಿಯ ಕ್ರಿಯಾಶೀಲ ಚಟುವಟಿಕೆಗಳ ಮೂಲಕ ನಮ್ಮ ಬಾಲಬಳಗ ಮಕ್ಕಳಲ್ಲಿರುವ ಕೌಶಲ್ಯವನ್ನು ಹೊರತೆಗೆದು ಒರೆಗಲ್ಲಿಗೆ ಹಚ್ಚಲು ನಿರಂತರ ಶ್ರಮಿಸುತ್ತಿದೆ

# ಧ್ವನಿ ಮುದ್ರಿತ ಸಂಗೀತ ಬಹಳ ಕಡಿಮೆ

ಸಾಮಾನ್ಯವಾಗಿ ಈಗ ಶಾಲಾ ವಾರ್ಷಿಕೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮವೆಂದರೆ ಸಿ.ಡಿ.ಯೊಳಗಿನ ಸಿನಿಮಾ ಹಾಡುಗಳನ್ನು (ಈಗ ಪೆನ್ ಡ್ರೈವ್) ಹಾಕಿ ಮಕ್ಕಳು ನೃತ್ಯ ಮಾಡುವುದು. ಎಲ್ಲ ಕಡೆಗಳಲ್ಲೂ ಇದೇ ಕಂಡುಬರುತ್ತದೆ. ಆದರೆ ನಮ್ಮ ಬಾಲಬಳಗದಲ್ಲಿ ಮಾತ್ರ ನಾವು ಧ್ವನಿ ಮೂಡಿತ ಸಂಗೀತವನ್ನು ಬೇಡವೇ ಬೇಡ ಎಂದು ಹೇಳುತ್ತೇವೆ. ಧ್ವನಿಮುದ್ರಿತ ಸಂಗೀತವನ್ನು ತೀರ ಕ್ವಚಿತ್ತಾಗಿ, ಅತ್ಯಲ್ಪ ಪ್ರಮಾಣದಲ್ಲಿ ಬಳಸುತ್ತೇವೆ.ಇದಕ್ಕೆ ಕಾರಣ ಹಲವು.

ಒಂದು ಧ್ವನಿ ಮುದ್ರಿತ ಸಂಗೀತಕ್ಕೆ ಹೂಂ ಎಂದುಬಿಟ್ಟರೆ, ಹಾಡುವ, ತಬಲಾ ಹಾರ್ಮೋನಿಯಮ್ ನುಡಿಸುವ ಅಂದರೆ ಸಂಗೀತ ಕಲಿಯುವ ಮಕ್ಕಳಿಗೆ ತಮ್ಮ ಪ್ರತಿಭೆಯನ್ನು ತೋರಿಸಲು ಅವಕಾಶವೇ ಇರುವುದಿಲ್ಲ. ಅವರು ನೃತ್ಯ, ನಾಟಕ ಮಾಡುವವರ ಹಾಗೆ ಕಲಾವಿದರಾಗದೇ ಕೇವಲ ನೋಡುಗರಾಗಿ ಉಳಿಯಬೇಕಾಗುತ್ತದೆ. ಇದು ಮಕ್ಕಳ ಸೃಜನಶೀಲತೆಗೆ ಪೆಟ್ಟು ಕೊಡುತ್ತದೆ. ಧ್ವನಿ ಮುದ್ರಿತ ಸಂಗೀತದಲ್ಲಿ ಅನುಭವಿ ಕಲಾವಿದರೆಲ್ಲ ಸೇರಿ ಬಹಳ ಉತ್ತಮ ಗುಣಮಟ್ಟದ ಸಂಗೀತವನ್ನೇ ನೀಡಿರುತ್ತಾರೆ. ಮಕ್ಕಳು ಆ ಮಟ್ಟದ ಸಂಗೀತವನ್ನು ಸೃಷ್ಟಿಸುವುದು ಸಾಧ್ಯವಿಲ್ಲ ಆದರೆ ಧ್ವನಿ ಮೂಡಿತ ಸಂಗೀತ ಜೀವಂತ ಸಂಗೀತವಲ್ಲ. ಎಷ್ಟೇ ಆದರೂ ಅದು ರಿಕಾರ್ಡೆಡ್ ಸಂಗೀತ. ಅದರಲ್ಲಿ ಈ ಕ್ಷಣದ ಜೀವಂತಿಕೆ ಇರುವುದಿಲ್ಲ. ಆದರೆ ಮಕ್ಕಳ ಸಂಗೀತ ಜೀವಂತವಾದುದು. ಅದು ಎಷ್ಟೆ ಅಪರಿಪೂರ್ಣ ಅಥವಾ ಕಡಿಮೆ ಗುಣಮಟ್ಟದ್ದು ಅನಿಸಿದರೂ ಅದರ ಜೀವಂತಿಕೆಯೇ ಅದರೊಳಗೆ ಪುಟಿಯುವ ಚೈತನ್ಯವೇ ಅದರೆಲ್ಲ ತಪ್ಪುಗಳೊಂದಿಗೆಯೂ ಅದನ್ನು ನಮಗೆ ಆಪ್ತವಾಗಿಸುತ್ತದೆ. ಅದನ್ನು ನಮ್ಮದಾಗಿಸುತ್ತದೆ.

ಎರಡು: ಧ್ವನಿ ಮುದ್ರಿತ ಸಂಗೀತಕ್ಕೆ ಅವಕಾಶ ಕೊಟ್ಟರೆ ಜನಪ್ರಿಯ ಹಿಂದಿ, ಕನ್ನಡ ಸಿನಿಮಾ ಹಾಡುಗಳೇ ಕಾರ್ಯಕ್ರಮದುದ್ದಕ್ಕೂ ವಿಜೃಂಭಿಸಿಬಿಡುತ್ತವೆ. ಸಂಗೀತ ಸಿಕ್ಕಿದೆ, ಆ ನೃತ್ಯದ ಹೆಜ್ಜೆಗಳನ್ನು ಸಿ.ಡಿ. ನೋಡಿ ಕಲಿಯಬಹುದು ಎಂಬ ಕಾರಣಕ್ಕಾಗಿ ಬಹಳಷ್ಟು ಸಲ ಆ ಹಾಡಿನ ಸಾಹಿತ್ಯ, ಅದರ ಹೂರಣವನ್ನು ಗಮನಿಸದೆಯೇ ಅದನ್ನು ಬಳಸಲಾಗುತ್ತದೆ. ಧ್ವನಿಮುದ್ರಿತ ಸಂಗೀತ ಬೇಡ ಅಂದಾಗ ಸಹಜವಾಗಿಯೇ ಶಿಕ್ಷಕರು ಮತ್ತು ಮಕ್ಕಳು ಜಾನಪದ/ಪಠ್ಯದ ಇತರ ಹಲವಾರು ಮೂಲಗಳಿಂದ ಹಾಡುಗಳನ್ನು ಹುಡುಕಿ ತೆಗೆಯುವ ಪ್ರಯತ್ನಕ್ಕೆ ಮುಂದಾಗುತ್ತಾರೆ.


ತಬಲಾ ಮಾಮಾ ಮತ್ತು ಗಾಯಕರು


ನಿಖಿಲೇಶ್ ಮತ್ತು ರಿಷಭ


ಓಂಕಾರ್, ಸಂಗೀತಾ, ಸಂಪದಾ, ಸುರಭಿ , ಸುಮೇಧ


ಟ್ರ್ಯಾಶ್ ಮ್ಯೂಸಿಕ್ ತಂಡ

# ಒಂಬತ್ತನೆಯ ಇಯತ್ತೆ ಔಟ್!!







ಈ ಬಾರಿಯ ಮಕ್ಕಳ ಹಬ್ಬದ ಭಾರ ಹೊತ್ತ 'ನವ ರತ್ನಗಳು'!!

ಮಕ್ಕಳ ಹಬ್ಬದ ಸಂದರ್ಭದಲ್ಲಿ ಎಲ್ಲ ಮಕ್ಕಳಿಗೂ ರಂಗದ ಮೇಲೆ ಬರಲು ಅವಕಾಶ ಮಾಡಿಕೊಡಬೇಕು ಎನ್ನುವುದು ನಮ್ಮ ನಿಲುವು. ಈ ಕಾರಣಕ್ಕಾಗಿಯೇ ಮಕ್ಕಳ ಸಂಖ್ಯೆ ಹೆಚ್ಚಾದ ಬಳಿಕ 'ಎರಡು ದಿನಗಳ ಮಕ್ಕಳ ಹಬ್ಬ' ಮಾಡಲು ಶುರು ಮಾಡಿದೆವು. ಕೆಲವು ವರ್ಷಗಳ ಹಿಂದೆ ಇದರಲ್ಲಿ ಇನ್ನೊಂದು ಮಾರ್ಪಾಡು ಮಾಡಿಕೊಂಡೆವು. ಅದುವೇ 'ಒಂಬತ್ತನೆಯ ಇಯತ್ತೆ ಔಟ್!' ಅಂದರೆ ಪ್ರತಿವರ್ಷ ಒಂಬತ್ತನೆಯ ತರಗತಿಯ ಮಕ್ಕಳಿಗೆ ರಂಗದ ಮೇಲೆ ಬರಲು ಅವಕಾಶವಿಲ್ಲ; ಅವರಿಗೆ ನಾಟಕ, ಹಾಡು, ನೃತ್ಯ ಏನೂ ಇಲ್ಲ – ಅವರು ರಂಗದಿಂದ ಔಟ್!

ಹತ್ತನೆಯ ತರಗತಿಯವರಿಗೆ ಇದು ಶಾಲೆಯಲ್ಲಿ ಕೊನೆಯ ವರ್ಷ. ಅವರಿಗಿದು ತಮ್ಮ ಶಾಲಾ ಜೀವನದ ಕೊನೆಯ ಮಕ್ಕಳ ಹಬ್ಬ. ಹಾಗಾಗಿ ಅವರಿಗೆ ಒಂದು ರೀತಿಯ ವಿದಾಯದ ಅವಕಾಶವಾಗಿ ರಂಗದ ಕಾರ್ಯಕ್ರಮಗಳು ಸಿಗುತ್ತವೆ. ಇದಕ್ಕೆ ಬದಲಾಗಿ ಒಂಬತ್ತನೆಯ ತರಗತಿ ಮಕ್ಕಳು ಸಂಬಂಧಿಸಿದ 'ರಂಗಚಟುವಟಿಕೆಗಳನ್ನು'ಹೊರತುಪಡಿಸಿ ಬಾಕಿ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ಪರದೆಗಳನ್ನು ಕಟ್ಟಿ ವೇದಿಕೆಯನ್ನು ಸಿಂಗರಿಸುವುದು, ಧ್ವನಿ ವರ್ಧಕ ಮತ್ತು ಬೆಳಕಿನ ವ್ಯವಸ್ಥೆ, ಫೋಟೋ ಮತ್ತು ವೀಡಿಯೋದ ವ್ಯವಸ್ಥೆ, ವಾಹನಗಳ ನಿಲುಗಡೆ, ಮಕ್ಕಳು ತಯಾರಿಸಿದ ಕರಕುಶಲ ವಸ್ತುಗಳ ಮಾರಾಟದ ವ್ಯವಸ್ಥೆ, ಅತಿಥಿಗಳನ್ನು ಕರೆತರುವುದು ಹಾಗೂ ಮುಖ್ಯವಾಗಿ ಇಡೀ ಎರಡೂ ದಿನಗಳ ಕಾರ್ಯಕ್ರಮ ನಿರೂಪಣೆ ಮತ್ತು ನಿರ್ವಹಣೆ – ಇದೆಲ್ಲವೂ ಒಂಬತ್ತನೆಯ ತರಗತಿಯ ಮಕ್ಕಳ ಜವಾಬ್ದಾರಿ. ಸಂತೋಷದ ಸಂಗತಿಯೆಂದರೆ ವರ್ಷದಿಂದ ವರ್ಷಕ್ಕೆ ಒಂಬತ್ತನೆಯ ತರಗತಿಯ ಮಕ್ಕಳು ಈ ಎಲ್ಲ ಜವಾಬ್ದಾರಿಗಳನ್ನು ತಮ್ಮ ತಮ್ಮೊಳಗೆ ಹಂಚಿಕೊಂಡು ಬಹಳ ಮುತುವರ್ಜಿಯಿಂದ ಮತ್ತು ಖುಷಿಯಿಂದ ನಿರ್ವಹಿಸುತ್ತಾ ಬಂದಿದ್ದಾರೆ. ಮೊದಲನೆಯ ದಿನದ ಕಾರ್ಯಕ್ರಮ ಮುಗಿದ ನಂತರ ಕೆಲವು ಒಂಬತ್ತನೆಯ ತರಗತಿಯ ಮಕ್ಕಳು ರಾತ್ರಿ ಶಾಲೆಯಲ್ಲಿಯೇ ಉಳಿದುಕೊಂಡು ವೇದಿಕೆಯ ಕಾವಲು ಮಾಡುತ್ತಾರೆ ಹಾಗೂ ಇದನ್ನೆಲ್ಲಾ ಮಾಡುವ ಮೂಲಕ ತಮಗೆ ಬಹಳ ಬೇರೆಬೇರೆ ತರದ ಕಲಿಕೆಯಾಯಿತು ಎಂಬುದನ್ನು ಗಮನಿಸುತ್ತಾರೆ, ವ್ಯಕ್ತಪಡಿಸುತ್ತಾರೆ. ಶಾಲೆಗಾಗಿ ಕೆಲಸ ಮಾಡುವ 'ನವ ರತ್ನ' ಗಳಿಗೆ ನಮ್ಮ ಧನ್ಯವಾದ.


ಮೊದಲ ಮಕ್ಕಳ ಹಬ್ಬ!!
(1997- ಮಾರ್ಚ್)
ಅಧ್ಯಕ್ಷರ ತೊಡೆಯ ಮೇಲೆ ಕುಳಿತ ಮಕ್ಕಳು


ಮಕ್ಕಳ ಹಬ್ಬ ಸಾಗಿ ಬಂದ ಪಥ





ಕುಣಿಯುವ ಹಬ್ಬ
ನಲಿಯುವ ಹಬ್ಬ
ಮಜಾ ಮಾಡುವ ಹಬ್ಬ
ಅದುವೇ ನಮ್ಮ ಮಕ್ಕಳ ಹಬ್ಬ
ಮಕ್ಕಳನ್ನು ಕುಣಿಸಿ
ಪಾಲಕರ ಮನವನ್ನು ನಲಿಸಿ
ಪ್ರೇಕ್ಷಕರಿಗೆ ಮನೋರಂಜನೆ ತರಿಸಿ
ಹೊಳೆಯುವ ಮುಖಗಳನ್ನು
ರಂಗಭೂಮಿ ಮೇಲೆ ತೋರಿಸಿ
ಕಣ್ತುಂಬಿಸುವ
ಹಬ್ಬಗಳ ಹಬ್ಬ
ಮಕ್ಕಳ ಹಬ್ಬ

ಪ್ರಿಯಾಂಕಾ. ಪಾಟೀಲ್



ಸುಮೇರ

ಮಕ್ಕಳ ಹಬ್ಬ 2013-14



ಮಿಂಚು, ಆದಿತ್ಯ, ಮೇಧಾ

ಮಕ್ಕಳ ಹಬ್ಬ- 2002



ವಿನಯ

ಮಕ್ಕಳ ಹಬ್ಬ 1999-2000

# ಪ್ರತಿ ವರ್ಷ ಬ್ಯಾರೆ ಬ್ಯಾರೆ ನಾಟಕ!!



ಮಕ್ಕಳ ಹಬ್ಬದಲ್ಲಿ ಪಾಲಕರ ಸಹಯೋಗ



ಮಕ್ಕಳ ಹಬ್ಬ 2013-14



ಮಕ್ಕಳ ಹಬ್ಬ 2013-14



ಮಕ್ಕಳ ಹಬ್ಬ 2013-14


೧೪ ನೇ ಮಕ್ಕಳ ಹಬ್ಬ-2010


ಮಕ್ಕಳ ಹಬ್ಬ- 2010-11


ಶಿಕ್ಷಕರು ಹಾಗೂ ಮಕ್ಕಳಿಂದಲೇ ಎಲ್ಲ ರಂಗ ಪರಿಕರಗಳ ತಯಾರಿಕೆ



ಲಾವಣಿ ನೃತ್ಯ ಮಕ್ಕಳ ಹಬ್ಬ- 2013-14

# ಮಕ್ಕಳ ಹಬ್ಬದ ಚಿತ್ರಗಳು





2014




ಪ್ರತಿ ಬಾರಿ ಹೊಸ ವಿನ್ಯಾಸ!





2012





ನಮಗೆ ಸಿಕ್ಕ ಎಲ್ಲಕಿಂತ ಹಳೆಯ
ಆಮಂತ್ರಣ ಪತ್ರಿಕೆ-2003


## ಮಕ್ಕಳ ಹಬ್ಬದ ಆಮಂತ್ರಣ ಪತ್ರಿಕೆಗಳು





2006




2006




2012




2015

## ಮಕ್ಕಳ ಹಬ್ಬದ ಆಮಂತ್ರಣ ಪತ್ರಿಕೆಗಳು



ಈ ಬಾರಿಯ 'ಹತ್ತು'!!




ನಮ್ಮ ಭಾರತ ಸ್ವಚ್ಛ ಭಾರತ!!



ನಮ್ಮ ಶಾಲೆಯಲ್ಲಿ ಬೇಂದ್ರೆ, ಕುವೆಂಪು, ಮಾಸ್ತಿ !!

ಈ ಬಾರಿಯ ಮಕ್ಕಳ ಹಬ್ಬ!!




ಹೂಚಿಟ್ಟೆಗಳು!!



ನಮ್ಮದೇ ಅಂಗಡಿ- ನಾವೇ ಮಾಡಿದ ಸಾಮಾನು

ವೀರೇಶ



ಕೊ ಕ್ಕೊ ಕೋ...

ರೋಹನ್




ನಾಟ್ಯ ಪ್ರವೀಣರು

ಈ ಬಾರಿಯ ಮಕ್ಕಳ ಹಬ್ಬ!!

ನವರತ್ನಗಳು





ಕೇದಾರೇಶ್ವರ

ನಾಟಕ - ನಿಜವಾದ ಸ್ವರ್ಗ





waves





ಸರ್ಕಸ್

# ನಮ್ಮ ಬಳಗ



ಸಂಪದಾ



ತುಷಾರ



ದೀಪಕ



ಶರತ



ಮಿಂಚು



ಚಿನ್ಮಯೀ

ನಮ್ಮ ಈ ಪುಟ್ಟ ಪ್ರಯತ್ನಕ್ಕೆ ನಿಮ್ಮ ಅನಿಸಿಕೆಗಳು ಮತ್ತು ಮೆಚ್ಚುಗೆಗಳ ಮೂಲಕ ಪ್ರೋತ್ಸಾಹಿಸಿ.

ನೀವು ಕೂಡ ನಮ್ಮ ಜೊತೆ ಯಾವುದಾದರೂ ರೀತಿಯಲ್ಲಿ ಕೈ ಜೋಡಿಸಬಹುದಾದಲ್ಲಿ ತುಂಬಾ ಸಂತೋಷ.

ನಮಗೆ ಮಿಂಚಂಚೆ ಬರೆಯಿರಿ.

chiguruchilume@gmail.com